ವಿತ್ತ ಸಂಚಿಕೆ
APRIL 2025

# INSPIRE INDIA



ಶರಣ್ ಪಾಟೀಲ್
ಆರ್ಥಿಕ ತಜ್ಞರು

## ಸಲಹೆ ನಮ್ಮದು ಹೂಡಿಕೆ ನಿಮ್ಮದು

INSPIRE INDIA WEALTH PRIVATE LTD. @ 65, 'Surasa Enclave' 1st floor, Puttanna Road, Gandhi Bazar Basvanagudi, Bengaluru 560004, Ph: +91 8042129917, 9035414414. Mail: info@inspireindiafs.com Website: www.inspireindiafs.com



ನೀವೇನು ಮಾಡುವಿರೋ ಅದನ್ನು ಪ್ರೀತಿಸಿ, ಅದಕ್ಕಿಂತ ದೊಡ್ಡ ಕೆಲಸ ಇನ್ನೊಂದಿಲ್ಲ.
–ಸ್ಟೀವ್ ಜಾಬ್ಸ್



ಸೋಲಲದೇ ಇರುವ ಒಬ್ಬ ವ್ಯಕ್ತಿಯನ್ನು ತೋರಿಸಿ, ಪ್ರಯತ್ನವನ್ನೇ ಮಾಡದ ವ್ಯಕ್ತಿಯನ್ನು ನಾನು ತೋರಿಸುವೆ.
–ರಿಚರ್ಡ್ ಬ್ರಾಸನ್

ನಿಮ್ಮ ಅತ್ಯಂತ ಅತೃಪ್ತ ಗ್ರಾಹಕನೇ ನಿಮ್ಮ ಕಲಿಕೆಯ ಶ್ರೇಷ್ಠ ಗುರು..
–ಬಿಲ್ ಗೇಟ್ಸ್



# SIP ನಂಬಿ ಕರಡಿಯನು ಮಣಿಸಿ!



**ಪೋರ್ಟ್‌ಫೋಲಿಯೋ** ಪರದೆಯ ಮೇಲೆ ಛಾಪಿಸಿರುವ ಕೆಂಪು ಸಮುದ್ರ ಮಾರುಕಟ್ಟೆಯ ಈಗಿನ ಗೊಂದಲದ ಸ್ಥಿತಿಗೆ ಸ್ಪಷ್ಟ ಸಾಕ್ಷಿಯಾಗಿದೆ. ಕಷ್ಟಪಟ್ಟು ದುಡಿದ ಹಣ ಇದ್ದಕ್ಕಿದ್ದಂತೆ ಮಾಯವಾಗುತ್ತಿರುವ ದೃಶ್ಯ ಎಂಥ–ವರ ಹೊಟ್ಟೆಯಲ್ಲಿ ಉರಿ ಎಬ್ಬಿಸುತ್ತದೆ. ಇದು ಬಹುತೇಕರ ಅನುಭವ ಕೂಡ ಹೌದು. ಎಎಂಪಿಐ ದತ್ತಾಂಶದ ಪ್ರಕಾರ ಜನವರಿ ತಿಂಗಳಿನಲ್ಲಿನ ಎಸ್‌ಐಪಿ ನಿಲುಗಡೆ ಅನುಪಾತವು ಆಘಾತಕಾ–ರಿಯಾದ ರೀತಿಯಲ್ಲಿ ಶೇ.109ಕ್ಕೇರಿತು. ಇದು ಹೂಡಿಕೆದಾರರ ಆತಂಕಕ್ಕೆ ಸ್ಪಷ್ಟ ಸೂಚನೆಯಾಗಿ–ತ್ತು. ನಿಲುಗಡೆಯಾದ ಎಸ್‌ಐಪಿ ಖಾತೆಗಳ ಭಾರೀ ಸಂಖ್ಯೆಯು ಹೊಸ ನೋಂದಣಿಯನ್ನು ಮೀರಿಸಿದ್ದು ಮಾರುಕಟ್ಟೆಯಲ್ಲಿ ಆವರಿಸಿಕೊಂಡ ಭಯದ ವಾತಾವರಣಕ್ಕೆ ಸಾಕ್ಷಿಯಾಗಿತ್ತು.

ಆದಾಗ್ಯೂ, ಇತಿಹಾಸ ಮತ್ತು ಹಣ–ಕಾಸು ಸಂಬಂಧಿತ ಬುದ್ಧಿವಂತಿಕೆಯು ಇಂತಹ ತಕ್ಷಣದ ಪ್ರತಿಕ್ರಿಯೆ ಸಾಮಾನ್ಯವಾಗಿ ಅಪೇಕ್ಷೆಗೆ ವಿರುದ್ಧವಾಗಿರುತ್ತದೆ. ವಾಸ್ತವವಾಗಿ, ಮಾರುಕಟ್ಟೆಯಲ್ಲಿ ಉಂಟಾಗುವ ಕುಸಿತಗಳು ನಿಮ್ಮ ಎಸ್‌ಐಪಿಗಳನ್ನು ಸ್ಥಿರವಾಗಿ ಮುಂದುವರಿಸುವ ಮೂಲಕ ಹೂಡಿಕೆ ಸಂಗ್ರಹವನ್ನು ಬಲಪಡಿಸಲು ಒಂದು ಚಿನ್ನದಂತಹ ಅವಕಾಶವನ್ನು ಒದಗಿಸುತ್ತವೆ. ಮಾರುಕಟ್ಟೆ ಕುಸಿತಗಳು ಅನಿವಾರ್ಯವಾಗಿದ್ದು, ದೊಡ್ಡ ಯೋಜನೆಯಲ್ಲಿ ಉಂಟಾಗುವ ತಾತ್ಕಾಲಿಕ ತೊಡಕುಗಳಾಗಿವೆ. ಸಹಜ ಪ್ರತಿಕ್ರಿಯೆಗಳಿಗೆ ವಿರುದ್ಧವಾಗಿ, ಇಂತಹ ಹಂತಗಳಲ್ಲಿ ಎಸ್‌ಐಪಿಗಳನ್ನು ಮುಂದುವರಿಸುವುದು ಬುದ್ಧಿವಂತ ನಿರ್ಧಾರವಾಗಿರಬಹುದು. ಇದಕ್ಕೆ ಕಾರಣ ಇಲ್ಲಿದೆ:

**ಮಾರುಕಟ್ಟೆ ಕುಸಿತ ತಾತ್ಕಾಲಿಕ, ಪ್ರಗತಿ ಸುದೀರ್ಘಾವಧಿ:**

ಮಾರುಕಟ್ಟೆಯಲ್ಲಿ ಏರಿಳಿತಗಳು ಉಂಟಾಗುತ್ತಲೇ ಇರುತ್ತವೆ. ಆದರೆ ಅವು ಅಂತಿಮವಾಗಿ ಚೇತ–




ಆಸ್ತಿ ಹಂಚಿಕೆ ಎಂಬ ಅಪೂರ್ವ ಕಾರ್ಯತಂತ್ರ



3

ಫಾರಿನ್ ಟೂರ್ ಹೊರಟಿರಾ? ಜೊತೆಗಿರಲಿ ಟ್ರಾವೆಲ್ ವಿಮೆ



5

ರಿಸಿಕೊಂಡು ತಮ್ಮ ಮೇಲ್ಮುಖ ಪಥವನ್ನು ಮುಂದುವರೆಸುತ್ತವೆ ಎಂಬುದನ್ನು ಇತಿಹಾಸ ನಮಗೆ ಮತ್ತೆ ಮತ್ತೆ ಸಾಬೀತುಪಡಿಸಿವೆ. ಕುಸಿತದ ಸಂದರ್ಭದಲ್ಲಿ ಗಾಬರಿಗೆ ಬಿದ್ದು ಮಾರಾಟ ಮಾಡುವುದರಿಂದ ನಷ್ಟ ಖಚಿತ. ಆದರೆ ಹೂಡಿಕೆಯಲ್ಲಿಯೇ ಉಳಿಯುವುದರಿಂದ ಚೇತರಿಕೆಯ ಲಾಭವನ್ನು ಪಡೆಯಲು ನಿಮಗೆ ಅವಕಾಶ ಸಿಗುತ್ತದೆ. ಏಕೆಂದರೆ ಮಾರುಕಟ್ಟೆಯಲ್ಲಿ ಉಂಟಾಗಿರುವ ಏರಿಳಿತಗಳು ಕಾಲಾನಂತರದಲ್ಲಿ ಸಮತೋಲನ ಸ್ಥಿತಿಗೆ ಬರುತ್ತವೆ. ಪರಿಣಾಮವಾಗಿ, ನಿಮ್ಮ ಹೂಡಿಕೆಯ ಅವಧಿಯು ಪೋರ್ಟ್‌ಫೊಲಿಯೊ ಬೆಳವಣಿಗೆಯ ಮೇಲೆ ಮಾರುಕಟ್ಟೆಯ ಏರಿಳಿತದ ಪರಿಣಾಮವನ್ನು ಕಡಿಮೆ ಮಾಡುತ್ತದೆ.

| ವರ್ಷ | ಘಟನೆ | ಕುಸಿತದ ತಿಂಗಳುಗಳು | ಕುಸಿತದ ಶೇಕಡಾವಾರು | ಕುಸಿತದ ನಂತರ 36 ತಿಂಗಳ ಆದಾಯ(Absolute %) |
|---|---|---|---|---|
| 1991 | ಕೊಲ್ಲಿ ಯುದ್ಧ/ ಭಾರತದ ಹಣಕಾಸು ಬಿಕ್ಕಟ್ಟು | 3+ | 38.69% | 316.53% |
| 1992-93 | ಹರ್ಷದ್ ಮೆಹ್ತಾ ಹಗರಣ | 12+ | 54.41% | 84.85% |
| 1994-96 | ರಿಲಯನ್ಸ್, FII | 27+ | 40.72% | 71.73% |
| 2000-01 | ತಾಂತ್ರಿಕ ಸಮಸ್ಯೆಗಳು | 19+ | 56.18% | 115.60% |
| 2004 | ಬಿಜೆಪಿಯ ಚುನಾವಣಾ ಸೋಲು | 4+ | 27.27% | 217.41% |
| 2006 | ಮಾರಾಟ | 1+ | 28.64% | 70.65% |
| 2008-09 | ಜಾಗತಿಕ ಹಣಕಾಸು ಬಿಕ್ಕಟ್ಟು | 14+ | 60.91% | 114.49% |
| 2015-16 | ಚೀನಾ ಆರ್ಥಿಕ ಬಿಕ್ಕಟ್ಟು | 12+ | 22.67% | 58.57% |
| 2020 | ಕೋವಿಡ್–19 ಬಿಕ್ಕಟ್ಟು | 2+ | 37.93% | 122.95% |

**ಮೂಲ:** ಬಿಎಸ್‌ಇ ಇಂಡಿಯಾ॥ 2025ರ ಫೆಬ್ರುವರಿ 28ರ ದತ್ತಾಂಶ.

ಹಿಂದಿನ ಲಾಭಗಳು ಭವಿಷ್ಯದಲ್ಲಿ ಸಿಗಲೇಬೇಕೆಂದಿಲ್ಲ, ಮತ್ತು ಭವಿಷ್ಯದ ಲಾಭದ ಖಾತರಿಯನ್ನೂ ಹೇಳುವುದು ಕಷ್ಟ.ಸೆನ್ಸೆಕ್ಸ್ ಶೇ.20ಕ್ಕಿಂತ ಹೆಚ್ಚು ಕುಸಿದು 9 ಬಾರಿ ಚೇತರಿಸಿಕೊಂಡಿದೆ.ಆದರೆ ಕಳೆದ ಮೂರು ವರ್ಷಗಳಲ್ಲಿ ಪ್ರತಿ ಬಾರಿಯೂ ಚೇತ–ರಿಸಿಕೊಂಡಿದೆ.ಕಷ್ಟದ ಸಮಯದಲ್ಲೇ ದೀರ್ಘಕಾಲೀನ ಸಂಪತ್ತು ನಿರ್ಮಾಣವಾಗುತ್ತದೆ ಎಂಬುದನ್ನು ನಾವು ನೆನಪಿಟ್ಟುಕೊಳ್ಳಬೇಕು.

ಮಾರುಕಟ್ಟೆ ಕುಸಿದಾಗ SIP (ಕ್ರಮಬದ್ಧ ಹೂಡಿಕೆ ಯೋಜನೆ) ಲಾಭ ತರುತ್ತದೆ. ಮಾರುಕಟ್ಟೆ ಏರಿಳಿತವಾದಾಗಲೂ ನಿರಂತರವಾಗಿ ಖಖಕ ಮೂಲಕ ಹೂಡಿಕೆ ಮಾಡಿದರೆ, ಬೆಲೆಯಲ್ಲಿ ಕುಸಿತ ಉಂಟಾದಾಗ ಹೆಚ್ಚು ಯೂನಿಟ್‌ಗಳು ಸಿಗುತ್ತವೆ, ಬೆಲೆ ಹೆಚ್ಚಾದಾಗ ಕಡಿಮೆ ಯೂನಿಟ್‌ಗಳು ಸಿಗುತ್ತವೆ. ಇದರಿಂದ ಸರಾಸರಿ ಖರೀದಿ ಬೆಲೆ ಕಡಿಮೆಯಾಗುತ್ತದೆ.

ಉದಾಹರಣೆಗೆ, ನೀವು ಪ್ರತಿ ತಿಂಗಳು SIP ಮೂಲಕ ಮ್ಯೂಚುವಲ್ ಫಂಡ್‌ನಲ್ಲಿ ರೂ5,000 ಹೂಡಿಕೆ ಮಾಡುತ್ತೀರಿ ಎಂದುಕೊಳ್ಳಿ:

**ಮಾಸಿಕ1:** ಎನ್‌ಎವಿ ರೂ.50 –ನೀವು 100 UNIT ಖರೀದಿಸುವಿರಿ (ರೂ.5,000 ರೂ.50)

**ಮಾಸಿಕ2:** ಎನ್‌ಎವಿ ರೂ.40 –ನೀವು 125 UNIT ಖರೀದಿಸುವಿರಿ (ರೂ.5,000 ರೂ.40)

**ಮಾಸಿಕ3:** ಎನ್‌ಎವಿ ರೂ.25 –ನೀವು 200 UNIT ಖರೀದಿಸುವಿರಿ (ರೂ.5,000 ರೂ.20)

**ಮಾಸಿಕ4:** ಎನ್‌ಎವಿ ರೂ.50 –ನೀವು 100 UNIT ಖರೀದಿಸುವಿರಿ (ರೂ.5,000 ರೂ.50)

**ಒಟ್ಟು ಹೂಡಿಕೆ:** ರೂ20000. ಖರೀದಿಸಿದ ಒಟ್ಟು UNIT: 525. 4ತಿಂಗಳಲ್ಲಿ ಸರಾಸರಿ ಎನ್‌ಎವಿ: ರೂ.41.25. ಪ್ರತಿ ಯೂನಿಟ್ ವೆಚ್ಚ:ರೂ38.10 (ರೂ.20,000 525).

ಬೆಲೆಯಲ್ಲಿ ಏರಿಳಿತ ಉಂಟಾದರೂ ಪ್ರತಿ ಯೂನಿಟ್‌ಗೆ ಅತ್ಯಂತ ಕಡಿಮೆ ಎಂದರೂ ಲಭ್ಯವಾಗುವ ಸರಾಸರಿ ವೆಚ್ಚ ರೂ.38.10. ಇದು ನಾಲ್ಕು ತಿಂಗಳ ಸರಾಸರಿ ಎನ್‌ಎವಿ ರೂ.41.25ಕ್ಕಿಂತ ಕಡಿಮೆ.

ಈ ವಿಧಾನದಿಂದ ಮಾರುಕಟ್ಟೆ ಕುಸಿತವು ಕನಿಷ್ಠ ಬೆಲೆಗೆ ಹೆಚ್ಚು ಯೂನಿಟ್‌ಗಳನ್ನು ಸಂಗ್ರಹಿಸಲು ನಿಮಗೆ ಅವಕಾಶಮಾಡಿಕೊಡುತ್ತದೆ.

**ಮಾರುಕಟ್ಟೆಯ ಸಮಯ:** ಮಾರುಕಟ್ಟೆ ಯಾವಾಗ ಏರುಗತಿಯಲ್ಲಿ ಸಾಗುತ್ತದೆ ಮತ್ತು ಪತನ ಹೊಂದುತ್ತದೆ ಎಂಬುದನ್ನು ಊಹಿಸುವುದು ಕಷ್ಟಸಾಧ್ಯ. ಖರೀದಿ ಮತ್ತು ಮಾರಾಟದ ಸಮಯವನ್ನು ನಿಗದಿಪಡಿಸಲು ಪ್ರಯತ್ನಿಸುವುದು ಗಣನೀಯ ಲಾಭದ ಅವಕಾಶಗಳನ್ನು ಕಳೆದುಕೊಳ್ಳಲು ಕಾರಣವಾಗಬಹುದು. ಮಾರುಕಟ್ಟೆಯ ಅತ್ಯುತ್ತಮ ದಿನಗಳಲ್ಲಿ ಕೆಲವನ್ನು ಕಳೆದುಕೊಂಡರೂ ಒಟ್ಟಾರೆ ಲಾಭ ತೀವ್ರವಾಗಿ ಕಡಿಮೆಯಾಗಬಹುದು ಎಂದು ಐತಿಹಾಸಿಕ ದತ್ತಾಂಶವು ತೋರಿಸುತ್ತದೆ. ಆದರೆ, ಸ್ಥಿರವಾಗಿ ಹೂಡಿಕೆ ಮಾಡುವುದರಿಂದ ಕಂಪೌಂಡಿಂಗ್ ಲಾಭವನ್ನು ಪಡೆಯಲು ಮತ್ತು ಗಮನಾರ್ಹ ದೀರ್ಘಾವಧಿಯ ಬೆಳವಣಿಗೆಯನ್ನು ಸಾಧಿಸಲು ಸಾಧ್ಯವಾಗುತ್ತದೆ.ನಿಮ್ಮ SIP ಗಳನ್ನು ನಿಲ್ಲಿಸುವುದರಿಂದ ಈ ಕಂಪೌಂಡಿಂಗ್ ಪರಿಣಾಮಕ್ಕೆ ಅಡ್ಡಿಯಾಗುತ್ತದೆ, ಇದು ನಿಮ್ಮ ಆರ್ಥಿಕ ಅಗತ್ಯಗಳಿಗೆ ಅಡ್ಡಿಯುಂಟುಮಾಡಬಹುದು ಕೂಡ.

45 ವರ್ಷಗಳ ಕಾಲ ಷೇರು ಮಾರುಕಟ್ಟೆಯಲ್ಲಿ ವ್ಯವಹರಿಸುತ್ತಿರುವ ಮೂವರು ಹೂಡಿಕೆದಾರರನ್ನು ಊಹಿಸಿಕೊಳ್ಳಿ. ಹೂಡಿಕೆದಾರ ಎ, ಸಮಯವನ್ನು ನಿಗದಿಪಡಿಸುವಲ್ಲಿ ಪರಿಣಿತ, ಮಾರುಕಟ್ಟೆಯ ವಾರ್ಷಿಕ ಕನಿಷ್ಠ ಬೆಲೆಯಲ್ಲಿ ಸ್ಥಿರವಾಗಿ ಖರೀದಿಸುತ್ತಾನೆ – ಇದು ವಾಸ್ತವದಲ್ಲಿ ಬಹುತೇಕ ಅಸಾಧ್ಯವಾದ ಸಾಧನೆ. ಹೂಡಿಕೆದಾರ ಬಿ, ದುರದೃಷ್ಟದಿಂದ ಬಳಲುತ್ತಾ, ಯಾವಾಗಲೂ ಮಾರುಕಟ್ಟೆಯ ಗರಿಷ್ಠ ಬೆಲೆಯಲ್ಲಿ ಖರೀದಿಸುತ್ತಾನೆ. ಹೂಡಿಕೆದಾರ ಸಿ, ಶಿಸ್ತಿನ ಹೂಡಿಕೆಯ ಪ್ರತೀಕ, ವ್ಯವಸ್ಥಿತ ಹೂಡಿಕೆ ಯೋಜನೆಯನ್ನು (SIP) ಬಳಸುತ್ತಾನೆ, ಏಪ್ರಿಲ್ 1979 ರಿಂದ ಫೆಬ್ರವರಿ 2025 ರವರೆಗೆ ಪ್ರತಿ ತಿಂಗಳ 10 ನೇ ತಾರೀಖಿನಂದು ನಿಗದಿತ ಮೊತ್ತವನ್ನು ಹೂಡಿಕೆ ಮಾಡುತ್ತಿರುತ್ತಾನೆ.

2025ರ ಫೆಬ್ರುವರಿ ವರೆಗಿನ ಫಲಿತಾಂಶಗಳು ಕಣ್ಣಿಗೆ ಕಟ್ಟುವಂತಿವೆ. ಯಾವತ್ತೂ ಮಾರುಕಟ್ಟೆ ಸಮಯವನ್ನು ಕಾಯ್ದುಕೊಳ್ಳುವ ಹೂಡಿಕೆದಾರ–ಎ ವಾರ್ಷಿಕ ಶೇ.14.79ರಷ್ಟು ಆದಾಯವನ್ನು ಸಾಧಿಸಿದ.ಯಾವತ್ತೂ ಅಕಾಲಿಕ ಹೂಡಿಕೆಗಳನ್ನು ಮಾಡುತ್ತಿದ್ದ ಹೂಡಿಕೆದಾರ–ಬಿ ಇವೆಲ್ಲದರ ನಡುವೆಯೂ ಶೇ.13.94ರಷ್ಟು ಗೌರವಾನ್ವಿತ ವಾರ್ಷಿಕ ಆದಾಯ ಪಡೆದ. ಆಶ್ಚರ್ಯಕರ ಸಂಗತಿ ಎಂದರೆ ಎಸ್‌ಐಪಿಯಲ್ಲಿ ಸ್ಥಿರತೆಯನ್ನು ಕಾಯ್ದುಕೊಳ್ಳುವ ಹೂಡಿಕೆದಾರ–ಸಿ ವಾರ್ಷಿಕ ಶೇ.14.34ರಷ್ಟು ಆದಾಯವನ್ನು ಗಳಿಸಿದ. ಅಂದರೆ ಈತ ಮಾರುಕಟ್ಟೆ ಸಮಯವನ್ನು ಕರಾರುವಕ್ಕಾಗಿ ಕಾಯ್ದುಕೊಳ್ಳುವ ಹೂಡಿಕೆದಾರನಿಗೆ ಬಹುತೇಕ ಸರಿಸಮಾನವಾದ ನಿರ್ವಹಣೆ ತೋರಿದ್ದಾನೆ.

ಈ ಹೋಲಿಕೆಯು ನಿರ್ಣಾಯಕ ಹೂಡಿಕೆ ಸಿದ್ಧಾಂತವನ್ನು ಬಿಂಬಿಸುತ್ತದೆ; ಎಸ್‌ಐಪಿಗಳ ಮೂಲಕ ಸತತವಾದ ಮತ್ತು ದೀರ್ಘಕಾಲೀನ ಹೂಡಿಕೆಯು ಪರಿಪೂರ್ಣ ಮಾರುಕಟ್ಟೆ ಸಮಯದ ಫಲಿತಾಂಶಗಳಿಗೆ ಹೋಲುವ ಮತ್ತು ಕೆಲವು ಸಂದರ್ಭಗಳಲ್ಲಿ ಅತ್ಯಂತ ನಿಕಟವಾದ ಆದಾ ಯವನ್ನು ನೀಡುತ್ತದೆ.

**ಮೂಲ:** ಬಿಎಸ್‌ಇ ವಿಶ್ಲೇಷಣೆ ಅವಧಿ:–1979ರ ಏಪ್ರಿಲ್– 2025ರ ಫೆ.

**ಬಾಟಮ್ ಲೈನ್:** ಮಾರುಕಟ್ಟೆ ಕುಸಿತದ ಸಂದರ್ಭದಲ್ಲಿ ಎಸ್‌ಐಪಿಯನ್ನು ನಿಲ್ಲಿಸಿಬಿಡುವ ಬದಲು ಹೂಡಿಕೆದಾರರು ಅದನ್ನೊಂದು ಅವಕಾಶಗಳೆಂದು ಪರಿಗಣಿಸಬೇಕು. SIPಗಳನ್ನು ಸ್ಥಿರ ಹಾಗೂ ದೀರ್ಘಕಾಲೀನ ಹೂಡಿಕೆಗಾಗಿ ವಿನ್ಯಾಸಗೊಳಿಸಲಾಗಿದೆ. ಮಾರುಕಟ್ಟೆ ಕೆಳಮುಖವಾಗಿ ವರ್ತಿಸುತ್ತಿದ್ದಾಗ SIP ಗಳನ್ನು ಮುಂದುವರಿಸುವುದರಿಂದ ನಿಮ್ಮ ಹಣಕಾಸಿನ ಗುರಿಗಳ ಮೇಲೆ ಗಮನ ಕೇಂದ್ರೀಕರಿಸಲು ಸಾಧ್ಯವಾಗುತ್ತದೆ. ಈಗಿನ ಮಾರುಕಟ್ಟೆ ಪರಿಸ್ಥಿತಿ ಕಳವಳಕಾರಿ ಅಂತೆನ್ನಿಸಬಹುದು. ಅಲ್ಪಾವಧಿ ಏರುಪೇರುಗಳು ದೀರ್ಘಾವಧಿ ಹೂಡಿಕೆ ಕಾರ್ಯತಂತ್ರದ ಹಳಿ ತಪ್ಪಿಸಬಾರದು. ಎಸ್‌ಐಪಿಗಳು ಸ್ಥಿರವಾದ ಸಂಪತ್ತು ಸಂಗ್ರಹಣೆಯ ಸಾಧನ. ಮಾರುಕಟ್ಟೆ ಏರಿಳಿತಗಳಿಗೆ ತ್ವರಿತ ಪರಿಹಾರವಲ್ಲ ಎಂಬುದನ್ನು ನೆನಪಿಟ್ಟುಕೊಳ್ಳಿ. ಹಾಗಾಗಿ ಮುಂದಿನ ಬಾರಿ ಮಾರುಕಟ್ಟೆ ಲಗಾಟಿ ಹೊಡೆ ದು, ಆಗ ಹೂಡಿಕೆಯ ಹಾದಿಯಲ್ಲಿ ಉಳಿದುಕೊಂಡರೆ ಮಾರುಕಟ್ಟೆ ಕುಸಿತ ಹೂಡಿಕೆದಾರರ ಒಳ್ಳೆಯ ಸ್ನೇಹಿತ ಎಂಬ ಮಾತು ನಿಮ್ಮೊಳಗೆ ಸ್ಥಿರವಾಗಿರಲಿ.



# ಆಸ್ತಿ ಹಂಚಿಕೆ ಎಂಬ ಅಪೂರ್ವ ಕಾರ್ಯತಂತ್ರ

**ಇತ್ತೀಚಿನ** ಮಾರುಕಟ್ಟೆಯಲ್ಲಿ ಕಾಣಿಸಿಕೊಂಡ ಅಸ್ಥಿರ ವಾತಾವರಣ ಅನೇಕ ಹೂಡಿಕೆದಾರರನ್ನು ಆತಂಕಕ್ಕೆ ದೂಡಿದೆ. ಕೊನೆಗೊಳ್ಳದ ಏರಿಳಿತಗಳಿಂದಾಗಿ ಅವರ ಪೋರ್ಟ್‌ಫೋಲಿಯೋ ಅಸ್ಥಿರಗೊಳ್ಳುವುದನ್ನು ಅವರು ನೋಡುತ್ತಿದ್ದಾರೆ. ಸಂಭಾವ್ಯ ಆರ್ಥಿಕ ಹಿಂಜರಿತಗಳು ಮತ್ತು ಭೌಗೋಳಿಕ ರಾಜಕೀಯ ಅನಿಶ್ಚಿತತೆಗಳ ಬಗ್ಗೆ ಕಾಣಿಸಿಕೊಳ್ಳುತ್ತಿರುವ ಹೆಡ್‌ಲೈನ್‌ಗಳು ಇಂತಹ ಆತಂಕದ ಬೆಂಕಿಗೆ ತುಪ್ಪ ಹಾಕಿದಂತಿವೆ. ಇಂತಹ ಸಂದರ್ಭದಲ್ಲಿ ಮಾರುಕಟ್ಟೆಯ ಅಲ್ಪಾವಧಿ ಏರಿಳಿತದ ಭಾವನಾತ್ಮಕ ಹಾವು–ಏಣಿ ಆಟದಲ್ಲಿ ಸಿಕ್ಕಿಹಾಕಿಕೊಳ್ಳುವುದು ಹಾಗೂ ಕ್ಷಣಿಕವಾದ ಟ್ರೆಂಡ್‌ಗಳನ್ನು ಬೆನ್ನಟ್ಟುವುದು ಮತ್ತು ಭಯಕ್ಕೆ ಬಿದ್ದು ಅಕಾಲಿಕವಾಗಿ ಮಾರಾಟ ಮಾಡುವುದು ಸುಲಭ. ಆದರೆ ಇಂತಹ ಗದ್ದಲದ ಸಮಯದಲ್ಲಿ ಕಾಲದ ಪರೀಕ್ಷೆಯಲ್ಲಿ ಉತ್ತೀರ್ಣವಾದ, ಆಗಾಗ್ಗೆ ಕಡೆಗಣಿಸಲಾದ ಹಾಗೂ ಸ್ಥಿರತೆಯ ದೀಪಸ್ತಂಭವಾಗಿ ನಿಲ್ಲುವ ಒಂದು ಕಾರ್ಯತಂತ್ರವೆಂದರೆ ಅದು ಆಸ್ತಿಹಂಚಿಕೆ. ಒಂದು ಸರಳ ಬಂಡವಾಳ ವೈವಿಧ್ಯೀಕರಣಕ್ಕಿಂತ ಹೆಚ್ಚಾಗಿ, ಒಂದು ಸುವ್ಯವಸ್ಥಿತವಾದ ಆಸ್ತಿ ಹಂಚಿಕೆ ಯೋಜನೆಯು ನಿಮ್ಮ ಹೂಡಿಕೆ ಪಯಣಕ್ಕೆ ಗಟ್ಟಿಯಾದ ತಳಪಾಯವನ್ನು ನಿರ್ಮಿಸುತ್ತದೆ. ಮಾರುಕಟ್ಟೆ ಕುಸಿತದ ಸಂದರ್ಭದಲ್ಲಿ ನಿರ್ಣಾಯಕ ರಕ್ಷಣೆ ಒದಗಿಸುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ದೀರ್ಘಕಾಲೀನ ಬೆಳವಣಿಗೆಗೆ ದೃಢವಾದ ಪಥವನ್ನು ಕಲ್ಪಿಸುತ್ತದೆ.

**ಮಾರುಕಟ್ಟೆ ಕುಸಿತದಲ್ಲಿ ನಿರ್ಣಾಯಕ ರಕ್ಷಣೆ**

**ಆಸ್ತಿ ಹಂಚಿಕೆ ಯಾಕೆ ಮುಖ್ಯ:** ಆಸ್ತಿ ಹಂಚಿಕೆಯು ಪೋರ್ಟ್‌ಫೋಲಿಯೋ ಕಾರ್ಯಕ್ಷಮತೆಯನ್ನು ಶೇ.94ರಷ್ಟು ಪ್ರಮಾಣದಲ್ಲಿ ಗಮನಾರ್ಹವಾಗಿ ಹೆಚ್ಚಿಸುತ್ತದೆ ಎಂಬ ಸತ್ಯವನ್ನು 1986ರ ಬ್ರಿನ್‌ಸನ್, ಹುಡ್ ಮತ್ತು ಬೀಬೋವರ್ ಅಧ್ಯಯನವು ಅನಾವರಣಗೊಳಿಸಿದೆ. ಅದಕ್ಕೆ ವ್ಯತಿರಿಕ್ತವಾಗಿ ಯೋಜನಾ ಆಯ್ಕೆ ಕೇವಲ ಶೇ.4 ಮತ್ತು ಮಾರುಕಟ್ಟೆ ಸಮಯಕ್ಕೆ ಶೇ.2ರಷ್ಟು ಪ್ರಮಾಣವನ್ನು ನೀಡಲಾಗಿದೆ.ಇದರ ಹೊರತಾಗಿಯೂ ಹೂಡಿಕೆದಾರರು ಯೋಜನಾ ಆಯ್ಕೆ ಮತ್ತು ಮಾರುಕಟ್ಟೆ ಸಮಯಕ್ಕೆ ಕೆಲವೊಮ್ಮೆ ಆದ್ಯತೆಯನ್ನು ನೀಡುವ ಮೂಲಕ ಆಸ್ತಿ ಹಂಚಿಕೆಯಂತಹ ನಿರ್ಣಾಯಕ ಅಂಶವನ್ನು ನಿರ್ಲಕ್ಷಿಸುತ್ತಾರೆ. ಸದೃಢವಾದ ಹೂಡಿಕೆ ಕಾರ್ಯತಂತ್ರವು ಭರಪೂರ ಆಸ್ತಿ ಹಂಚಿಕೆಯ ಅಡಿಪಾಯದ ಮೇಲೆ ನಿರ್ಮಾಣಗೊಳ್ಳಬೇಕು ಎಂಬುದನ್ನು ಈ ಸಂಶೋಧನೆ ಒತ್ತಿ ಹೇಳುತ್ತದೆ. ಯಾಕೆಂದರೆ ದೀರ್ಘಾವಧಿ ಆದಾಯದಲ್ಲಿ ಇದು ಅತ್ಯಂತ ಪ್ರಮುಖ ಅಂಶವಾಗಿದೆ.

ಗೆಲುವಿನ ಪೋರ್ಟ್‌ಫೋಲಿಯೊಗೆ ಆಸ್ತಿ ಹಂಚಿಕೆಯ ಅಡಿಪಾಯ

ಒಂದು ಆರೋಗ್ಯವಂತ ದೇಹಕ್ಕೆ ಸಮತೋಲಿತವಾದ ಆಹಾರಕ್ರಮ ಬೇಕಿರುವಂತೆ ಒಂದು ಆರೋಗ್ಯಪೂರ್ಣ ಹಣಕಾಸು ಪೋರ್ಟ್‌ಫೋಲಿಯೊಗೆ ಸಮತೋಲಿತವಾದ ಆಸ್ತಿ ಹಂಚಿಕೆ ಕೂಡ ಅತ್ಯಂತ ನಿರ್ಣಾಯಕ.ನಿಮ್ಮ ಹೂಡಿಕೆ ಪೋರ್ಟ್‌ಫೋಲಿಯೊವನ್ನು ನಿಮ್ಮ ಹಣಕಾಸಿನ ಆಹಾರಕ್ರಮವೆಂದು ಭಾವಿಸಿದರೆ ನೀವು ಒಂದೇ ರೀತಿಯ ಆಹಾರವನ್ನು ತಿನ್ನಲು ಸಾಧ್ಯವಿಲ್ಲ ಅಲ್ಲವೇ? ಅದೇ ರೀತಿ ಒಂದೇ ಒಂದು ಆಸ್ತಿ ವರ್ಗವನ್ನು ನಂಬಿಕೊಳ್ಳುವುದು ಎಂದರೆ ಕೇವಲ ಕಾರ್ಬೋಹೈಡ್ರೇಟ್ ಅಥವಾ ಪ್ರೋಟೀನ್‌ನ್ನು ನಂಬಿಕೊಂಡಂತೆಯೇ ಸರಿ.

ಆಸ್ತಿ ಹಂಚಿಕೆಯ ಮೂಲಾಧಾರವೆಂದರೆ ಬಂಡವಾಳ ವೈವಿಧ್ಯೀಕರಣ. ಅಂದರೆ ಹೂಡಿಕೆಯನ್ನು ಷೇರು, ಬಾಂಡ್‌ಗಳು, ನಗದು ಮತ್ತು ರಿಯಲ್ ಎಸ್ಟೇಟ್ ಅಥವಾ ಸರಕುಗಳಂತಹ ಪರ್ಯಾಯಗಳು ಸೇರಿದಂತೆ ನಾನಾ ಆಸ್ತಿ ವರ್ಗಗಳಲ್ಲಿ ಹಂಚಿಕೆ ಮಾಡುವುದು.ಈ ವಿಧಾನವು ಸುರಕ್ಷೆಯಾಗಿ ಕಾರ್ಯನಿರ್ವಹಿಸುತ್ತದೆ; ಒಂದು ಹೂಡಿಕೆ ಕುಸಿದಾಗ ಉಳಿದವು ಅದರ ಪರಿಣಾಮವನ್ನು ತಗ್ಗಿಸಬಹುದು. ಇದರಿಂದಾಗಿ ಒಟ್ಟಾರೆ ನಿಮ್ಮ ಪೋರ್ಟ್‌ಫೋಲಿಯೊ ಸ್ಥಿತಿಸ್ಥಾಪಕದ ರೀತಿಯಲ್ಲಿ ಕೆಲಸ ಮಾಡುತ್ತದೆ. ಅಂತಿಮವಾಗಿ,

ನಿಮ್ಮ ರಿಸ್ಕ್ ಸಹಿಷ್ಣುತೆ ಹಾಗೂ ಹಣಕಾಸು ಆಕಾಂಕ್ಷೆಗಳಿಗೆ ತಕ್ಕಂತೆ ಸಮತೋಲನದಿಂದ ಕೂಡಿದ ಪೋರ್ಟ್‌ಫೋಲಿಯೊ ನಿರ್ಮಾಣ ಮಾಡುವುದು ಮತ್ತು ವ್ಯಕ್ತಿಗತವಾದ ಹೂಡಿಕೆ ಕಾರ್ಯತಂತ್ರವನ್ನು ಸೃಷ್ಟಿಸುವುದು ಇದರ ಉದ್ದೇಶವಾಗಿದೆ.

ಸೂಕ್ತ ಆಸ್ತಿ ಹಂಚಿಕೆಯ ಸಂಕಲ್ಪ: ಪ್ರತಿಯೊಂದು ಆಸ್ತಿ ವರ್ಗವು ಅದರದೇ ಆದ ರಿಸ್ಕ್ ಮತ್ತು ಆದಾಯದ ಪ್ರೊಫೈಲ್‌ನ್ನು ಹೊಂದಿದೆ. ಹಾಗಾಗಿ ಅದಕ್ಕೆ ಸಿದ್ಧ ಸೂತ್ರಗಳ ಅಗತ್ಯವಿರುತ್ತದೆ. ಬಾಂಡ್‌ಗಳನ್ನೇ ಉದಾಹರಣೆಯಾಗಿ ತೆಗೆದುಕೊಳ್ಳೋಣ, ಅವು ಸಾಮಾನ್ಯವಾಗಿ ನಿಶ್ಚಿತ ಆದಾಯ ಮತ್ತು ಮರುಪಾವತಿ ಭರವಸೆಯನ್ನು ಕೊಡುತ್ತವೆ ಮತ್ತು ಷೇರುಗಳಿಗೆ ಹೋಲಿಸಿದರೆ ಕಡಿಮೆ ರಿಸ್ಕೀ. ಕಡಿಮೆ ಆದಾಯವನ್ನು ಕೊಡುವ ಬಾಂಡ್‌ಗಳು ಮಾರುಕಟ್ಟೆಯ ಅಸ್ಥಿರತೆಯ ಸಂದರ್ಭದಲ್ಲಂತೂ ಸ್ಥಿರತೆ ಮತ್ತು ಮೌಲ್ಯಯುತವಾದುದು.

ನಿಮ್ಮದೇ ಆದ ಆಸ್ತಿ ಹಂಚಿಕೆಯನ್ನು ಸಿದ್ಧಪಡಿಸುವುದರಿಂದ ನಿಮ್ಮ ಹಣ-ಕಾಸು ಅಗತ್ಯಗಳಿಗೆ ಅನುಗುಣವಾದ ಪೋರ್ಟ್‌ಫೋಲಿಯೊ ಸೃಷ್ಟಿಸಲು ಸಾಧ್ಯವಾಗುತ್ತದೆ ಮತ್ತು ಹಣಕಾಸು ಅಗತ್ಯಗಳನ್ನು ಸಾಧಿಸಲು ಸುಗಮ ಪಥ ಕಲ್ಪಿಸಿದಂತಾಗುತ್ತದೆ. ಈ ಸಂದರ್ಭದಲ್ಲಿ ಪರಿಶೀಲಿಸಬಹುದಾದ ಪ್ರಮುಖ ಅಂಶಗಳು:

**1. ರಿಸ್ಕ್ ಸಹಿಸುವ ಸಾಮರ್ಥ್ಯ:** ಸಂಭಾವ್ಯ ಹೂಡಿಕೆ ನಷ್ಟಗಳನ್ನು ಸಹಿಸಿಕೊಳ್ಳುವ ನಿಮ್ಮ ಸಾಮರ್ಥ್ಯ

**2.ಸಮಯದ ಪರಿಧಿ:** ನೀವು ಹೂಡಿಕೆ ಮಾಡಿದ ಹಣದ ಅಗತ್ಯಕ್ಕೂ ಮೊದಲು ನಿಮಗಿರುವ ಸಮಯದ ಪರಿಧಿ.

**3.ಹಣಕಾಸು ಅಗತ್ಯಗಳು:** ನಿಮ್ಮ ಹೂಡಿಕೆಗಳೊಂದಿಗೆ ಸಾಧಿಸಲು ಹೊರಟಿರುವ ನಿರ್ದಿಷ್ಟ ಉದ್ದೇಶಗಳು.

**4.ವಯಸ್ಸು:** ಸಾಮಾನ್ಯವಾಗಿ ಕಿರಿಯ ಹೂಡಿಕೆದಾರರು ಹೆಚ್ಚು ರಿಸ್ಕ್ ತಡೆದು ಕೊಳ್ಳಬಹುದು.




ಇದರ ಸಂಕೀರ್ಣತೆ ಬಗೆಗೆ ತಿಳಿದುಕೊಳ್ಳಲು ಮುಚ್ಯುಯಲ್ ಫಂಡ್ ವಿತರಕರ ಮಾರ್ಗದರ್ಶನ ಪಡೆದುಕೊಳ್ಳುವುದು ಉತ್ತಮ. ಈ ವೃತ್ತಿಪರರು ನಿಮ್ಮ ವೈಯಕ್ತಿಕ ಅಗತ್ಯಗಳನ್ನು ನಿಭಾಯಿಸಲು, ಸೂಕ್ತವಾದ ಆಸ್ತಿ ಹಂಚಿಕೆ ತಂತ್ರಗಳನ್ನು ಅಭಿವೃದ್ಧಿಪಡಿಸಲು ಹಾಗೂ ನಿಮ್ಮ ಬದಲಾಗುತ್ತಿರುವ ಅಗತ್ಯಗಳಿಗೆ ತಕ್ಕಂತೆ ಪೋರ್ಟ್‌ಫೋಲಿಯೊ ಇರುವಂತೆ ಮಾಡಲು ಬೆಂಬಲವನ್ನು ನೀಡುತ್ತಾರೆ.

**ಪರಿಶೀಲನೆ ಮತ್ತು ಮರುಹೊಂದಾಣಿಕೆ:** ಹೂಡಿಕೆ ಯೋಜನೆಯಲ್ಲಿ ಆಸ್ತಿ ಹಂಚಿಕೆ ಎನ್ನುವುದು ನಿರ್ಣಾಯಕ ಆರಂಭಿಕ ಹಂತವಾದರೂ ಅದೇ ಅಂತಿಮವಾದುದಲ್ಲ. ಮಾರುಕಟ್ಟೆಯಲ್ಲಿ ಆಗುವ ಏರಿಳಿತಗಳು ಅನಿವಾರ್ಯವಾಗಿ ನಿಮ್ಮ ಉದ್ದೇಶಿತ ಆಸ್ತಿ ಮಿಶ್ರಣದಲ್ಲಿ ವಿಭಜನೆಯನ್ನು ಉಂಟುಮಾಡುತ್ತವೆ. ಇದು ನಿರಂತರ ಪರಿಶೀಲನೆ ಮತ್ತು ಮರುಹೊಂದಾಣಿಕೆ ಅಗತ್ಯವನ್ನು ಪ್ರತಿಪಾದಿಸುತ್ತದೆ. ಅನಿಯಂತ್ರಿತವಾದ ಬದಲಾವಣೆಗಳು ಅನಪೇಕ್ಷಿತ ಅಸ್ಥಿರತೆಗೆ ಒಡ್ಡಬಹುದಾದ ಕಾರಣ ನಿಮ್ಮ ಅಪೇಕ್ಷಿತ ಅಪಾಯದ ಮಟ್ಟವನ್ನು ಕಾಯ್ದುಕೊಳ್ಳಲು ಕ್ರಿಯಾತ್ಮಕ ಪ್ರಕ್ರಿಯೆ ಅತ್ಯಗತ್ಯ.

ಮರುಹೊಂದಾಣಿಕೆಯಲ್ಲಿ ಶಿಸ್ತುಬದ್ಧವಾದ "ಕಡಿಮೆ ಬೆಲೆಗೆ ಖರೀದಿ, ಹೆಚ್ಚಿನ ಬೆಲೆಗೆ ಮಾರಾಟ" ವಿಧಾನವನ್ನು ಬಲಪಡಿಸುತ್ತದೆ. ಅತ್ಯುತ್ತಮವಾಗಿ ಕಾರ್ಯನಿರ್ವಹಿಸುವ ಆಸ್ತಿಗಳ ಮಾರಾಟ ಮತ್ತು ಕಳಪೆ ಕಾರ್ಯನಿರ್ವಹಣೆಯ ಆಸ್ತಿಗಳ ಖರೀದಿ ಮಾಡುವ ಮೂಲಕ ಮಾರುಕಟ್ಟೆ ಸ್ಥಿತಿಯನ್ನು ಬಂಡವಾಳ ಮಾಡಿಕೊಳ್ಳಲು ಹಾಗೂ ಭಾವನಾತ್ಮಕವಾದ ನಿರ್ಧಾರ ಕೈಗೊಳ್ಳದಂತೆ ತಡೆಯಲು ಸಾಧ್ಯವಾಗುತ್ತದೆ. ಈ ಬದಲಾವಣೆಗಳನ್ನು ಗುರುತಿಸಲು ಮತ್ತು ಸರಿಪಡಿಸಿಕೊಳ್ಳಲು ಅವಧಿ ಆಧಾರಿತ (ಉದಾ: ವಾರ್ಷಿಕ) ಅಥವಾ ಮಿತಿ ಆಧಾರಿತ (ಆಸ್ತಿ ವರ್ಗವು ಗಮನಾರ್ಹವಾಗಿ ವಿಚಲನೆಯಾದಾಗ) ಪರಾಮರ್ಶೆ ನಡೆಸುವುದು ಅತ್ಯಗತ್ಯ. ಮರುಹೊಂದಾಣಿಕೆ ಮಾಡುವುದಕ್ಕೂ ಮುನ್ನ ತೆರಿಗೆ ಪರಿಣಾಮವನ್ನು, ಅದರಲ್ಲಿಯೂ ಮುಖ್ಯವಾಗಿ ಬಂಡವಾಳ ಗಳಿಕೆಗಳು ಮತ್ತು ವಹಿವಾಟು ಶುಲ್ಕಗಳನ್ನು ಎಚ್ಚರಿಕೆಯಿಂದ ಪರಿಗಣಿಸಬೇಕು. ಸಾಧ್ಯವಾದಾಗಲೆಲ್ಲಾ ತೆ-ರಿಗೆ-ಅನುಕೂಲಕರ ಖಾತೆಗಳಲ್ಲಿ ಮರು ಹೊಂದಾಣಿಕೆಆದ್ಯತೆ ನೀಡಬೇಕು.

**ಬಾಟಮ್ ಲೈನ್:** ನಿರಂತರ ಮಾರುಕಟ್ಟೆ ಏರಿಳಿತಗಳು ಮತ್ತು ಆರ್ಥಿಕ ಅನಿಶ್ಚಿತತೆಗಳ ಜಗತ್ತಿನಲ್ಲಿ, ಆಸ್ತಿ ಹಂಚಿಕೆಯು ಆದ-ಾರಸ್ತಂಭವಾಗಿ ಕಾರ್ಯನಿರ್ವಹಿಸುತ್ತದೆ, ನಿಮ್ಮ ಹೂಡಿಕೆ ತಂತ್ರವನ್ನು ಸಮಂಜಸ ತತ್ವಗಳಲ್ಲಿ ನೆಲೆಗೊಳಿಸುತ್ತದೆ. ಮಾರುಕಟ್ಟೆ ಸಮಯ ಮತ್ತು ಯೋಜನೆ ಆಯ್ಕೆಯ ಮೂಲಕ ತ್ವರಿತ ಲಾಭಗಳ ಆಕರ್ಷಣೆ ಪ್ರಬಲವಾಗಿದ್ದರೂ, ಎಚ್ಚರಿಕೆಯಿಂದ ಸೃಷ್ಟಿಸಲಾದ ಆಸ್ತಿ ಹಂಚಿಕೆ ಯೋಜನೆಯು ದೀರ್ಘಾವಧಿ ಹೂಡಿಕೆ ಯಶಸ್ಸಿನ ಪ್ರಾಥ-ಮಿಕ ಚಾಲಕಶಕ್ತಿಯಾಗಿ ಕೆಲಸ ಮಾಡುತ್ತದೆ ಎಂಬುದನ್ನು ಡೇಟಾವು ಸಾಬೀತುಪಡಿಸುತ್ತದೆ.

ನಿಮ್ಮ ರಿಸ್ಕ್ ತಡೆಯುವ ಸಾಮರ್ಥ್ಯ, ಹಣಕಾಸಿನ ಅಗತ್ಯಗಳು ಮತ್ತು ಸಮಯದ ಪರಿಧಿಯನ್ನು ಅರ್ಥಮಾಡಿಕೊಳ್ಳುವ ಮೂಲಕ ಮತ್ತು ನಿಮ್ಮ ಪೋರ್ಟ್‌ಫೋಲಿಯೊವನ್ನು ನಿಯಮಿತವಾಗಿ ಪರಿಶೀಲಿಸುವ ಮತ್ತು ಮರುಹೊಂದಾಣಿಕೆ ಮಾಡುವ ಮೂಲಕ, ನೀವು ನಿಮ್ಮ ಹಣಕಾಸಿನ ಭವಿಷ್ಯವನ್ನು ಚೈತನ್ಯಶೀಲಗೊಳಿಸಬಹುದು. ಅಂತಿಮವಾಗಿ, ಆಸ್ತಿ ಹಂಚಿಕೆಯು ಕೇವಲ ಒಂದು ತಂತ್ರವಲ್ಲ; ಮಾರುಕಟ್ಟೆಯ ಸಂಕೀರ್ಣತೆಗಳನ್ನು ನಿಭಾಯಿಸಲು ಇರುವ ಒಂದು ಶಿಸ್ತಿನ ವಿಧಾನವಾಗಿದೆ, ಇದು ಆತ್ಮವಿಶ್ವಾಸ ಮತ್ತು ಸ್ಥಿರತೆಯೊಂದಿಗೆ ನಿಮ್ಮ ಹಣಕಾಸಿನ ಆಕಾಂಕ್ಷೆಗಳನ್ನು ಸಾಧಿಸಲು ಅಧಿಕಾರ ನೀಡುತ್ತದೆ.




**ವಿದೇಶಕ್ಕೆ** ಪ್ರಯಾಣ ಬೆಳೆಸುವುದೆಂದರೆ ಯಾರಿಗೇ ಆಗಲಿ ಅತ್ಯಪೂರ್ವವಾದ ಅನುಭವ. ಆದರೆ ಇಂತಹ ಸಂದರ್ಭದಲ್ಲಿಯೇ ಅನಿರೀಕ್ಷಿತ ಘಟನೆಗಳು ಸಂಭವಿಸಿ ನಮ್ಮ ಕನಸಿನ ರಜಾದಿನವು ದುಃಸ್ವಪ್ನವಾಗಿ ಪರಿಣಮಿಸಬಹುದು. ಇವುಗಳಲ್ಲಿ ವೈದ್ಯಕೀಯ ಅಗತ್ಯಗಳು, ವಿಮಾನದ ರದ್ದತಿ ಅಥವಾ ಬ್ಯಾಗೇಜ್ ಕಳೆದು ಹೋಗುವುದು ಸೇರಿದೆ. ಇಂತಹ ಹೊತ್ತಿನಲ್ಲಿ ಟ್ರಾವೆಲ್ ವಿಮೆ ಸುರಕ್ಷಾ ಕವಚವಾಗಿ ಕೆಲಸಮಾಡುತ್ತದೆ ಮತ್ತು ಅನಿರೀಕ್ಷಿತ ಹಣ–ಕಾಸು ಹೊರೆ ಕನಸಿನ ಟ್ರಿಪ್‌ನ್ನು ಹಾಳುಗೆಡಹದಂತೆ ತಡೆಯುತ್ತದೆ. ಅನೇಕ ಮಂದಿ ಪ್ರವಾಸಿಗರು ಟ್ರಾವೆಲ್ ಇನ್ಶೂರೆನ್ಸ್‌ನ ಮಹತ್ವವನ್ನು ನಿರ್ಲಕ್ಷಿಸುತ್ತಾರೆ. ಹಾಗೆ ಮಾಡಿ ಕಷ್ಟಕ್ಕೆ ಸಿಲುಕಿದ ಉದಾಹರಣೆಗಳಿವೆ. ವಿದೇಶಕ್ಕೆ ವಿಮಾನ ಹತ್ತುವುದಕ್ಕೂ ಮುನ್ನ ಪ್ರಯಾಣ ವಿಮೆ ನಿಮ್ಮ ದಾಖಲೆಗಳಲ್ಲಿ ಒಂದಾಗಿರುವುದು ಎಷ್ಟು ಮುಖ್ಯ ಎಂಬುದನ್ನು ಈ ಲೇಖನದಲ್ಲಿ ವಿವರಿಸುವ ಪ್ರಯತ್ನ ಮಾಡಲಾಗಿದೆ.

**ಭಾರತೀಯ ಪ್ರಯಾಣಿಕರಿಗೆ ಯಾಕೆ ಬೇಕು ಪ್ರಯಾಣ ವಿಮೆ**

ಅನೇಕ ಮಂದಿ ಭಾರತೀಯ ಪ್ರಯಾಣಿಕರು ಟ್ರಾವೆಲ್ ಇನ್ಶೂರೆನ್ಸ್ ಮಾಡುವುದು ಅನಗತ್ಯ ಖರ್ಚು ಎಂದೇ ಭಾವಿಸುತ್ತಾರೆ.ಆದರೆ ವಾಸ್ತವ ಸ್ಥಿತಿ ಭಿನ್ನವಾಗಿದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು.

ಪ್ರಯಾಣ ವಿಮೆಯು ವೈದ್ಯಕೀಯ ತುರ್ತುಸ್ಥಿತಿ, ಪ್ರವಾಸ ರದ್ದತಿ, ಸಾಮಾನು ಸರಂಜಾಮು ನಷ್ಟ, ವಿಮಾನ ವಿಳಂಬ, ವೈಯಕ್ತಿಕ ಹೊಣೆಗಾರಿಕೆ ಮತ್ತು ತುರ್ತು ಸ್ಥಳಾಂತರಗಳನ್ನು ಒಳಗೊಂಡಂತೆ ವ್ಯಾಪಕ ಶ್ರೇಣಿಯ ಅಪಾಯಗಳನ್ನು ಒಳಗೊಂಡಿರುತ್ತದೆ. ಪಾಲಿಸಿಯನ್ನು ಅವಲಂಬಿಸಿ, ವಿದೇಶದಲ್ಲಿ ಪ್ರಯಾಣಿಕರು ಭರಿಸಬೇಕಾದ ಖರ್ಚುಗಳು ಮತ್ತು ಲಾಜಿಸ್ಟಿಕಲ್ ದುಃಸ್ವಪ್ನಗಳಿಂದ ರಕ್ಷಿಸುತ್ತದೆ.

**ಪ್ರಯಾಣ ವಿಮೆಯಲ್ಲಿ ಯಾಕೆ ಹೂಡಿಕೆ ಮಾಡಬೇಕು ಎಂಬುದನ್ನು ಇಲ್ಲಿ ವಿವರಿಸಲಾಗಿದೆ:** **ವಿದೇಶದಲ್ಲಿ ಅಧಿಕ ವೈದ್ಯಕೀಯ ವೆಚ್ಚಗಳು:** ಅಮೆರಿಕ, ಬ್ರಿಟನ್ ಮತ್ತು ಯುರೋಪ್‌ನಂತಹ ದೇಶಗಳಲ್ಲಿ ವೈದ್ಯಕೀಯ ಚಿಕಿತ್ಸೆ ದುಬಾರಿಯಾಗಬಹುದು. ಸಣ್ಣ ಗಾಯವೂ ಸಹ ಲಕ್ಷಾಂತರ ಮೌಲ್ಯದ ಬಿಲ್‌ಗಳಿಗೆ ಕಾರಣವಾಗಬಹುದು.

**ಊಹಿಸಲಾಗದ ಪ್ರಯಾಣ ಅಡಚಣೆಗಳು:** ವಿಮಾನ ರದ್ದತಿ, ವಿಳಂಬ ಮತ್ತು ತಪ್ಪಿ ಹೋದ ಸಂಪರ್ಕಗಳು ಇವುಗಳಲ್ಲಿ ಸಾಮಾನ್ಯವಾಗಿದೆ, ಇದು ಹೆಚ್ಚುವರಿ ವೆಚ್ಚಗಳಿಗೆ ದಾರಿಮಾಡಿಕೊಡುತ್ತದೆ.

**ವಸ್ತುಗಳ ಕಳ್ಳತನ ಮತ್ತು ನಷ್ಟ:** ಪ್ರವಾಸಿ ತಾಣಗಳಲ್ಲಿ ಪಿಕ್‌ಪಾಕೆಟ್ ಮತ್ತು ಲಗೇಜ್ ದುರ್ಬಳಕೆ ಸಾಮಾನ್ಯ ಸಮಸ್ಯೆಗಳಾಗಿವೆ.

**ಕಾನೂನು ಮತ್ತು ಹೊಣೆಗಾರಿಕೆ ಸಮಸ್ಯೆಗಳು:** ವಿದೇಶಗಳಲ್ಲಿ ಅಪಘಾತ ಅಥವಾ ತಪ್ಪು ತಿಳುವಳಿಕೆಗಳಿಂದ ಕಾನೂನು ರೀತ್ಯ ತೊಂದರೆ ಉಂಟಾಗಬಹುದು, ಅವುಗಳ ಪರಿಹಾರ ದುಬಾರಿಯಾಗಬಹುದು.

ಪ್ರಯಾಣ ವಿಮೆ ಹೊಂದಿರುವುದರಿಂದ ಎಷ್ಟರ ಮಟ್ಟಿಗೆ ಲಾಭವಾಗುತ್ತದೆ ಎಂಬುದಕ್ಕೆ ಕೆಲವು ನಿಜ–ಜೀವನದ ಪ್ರಕರಣಗಳು ಇಲ್ಲಿವೆ:

**ನಿಜ–ಜೀವನದಲ್ಲಿ ಉಂಟಾದ ಕ್ಲೈಮ್ ಸನ್ನಿವೇಶಗಳು:**

**1. ಅಮೆರಿಕದಲ್ಲಿ ವೈದ್ಯಕೀಯ ತುರ್ತುಸ್ಥಿತಿ:** ದೆಹಲಿಯ ಉದ್ಯಮಿ ರವಿ ಶರ್ಮಾ ಅವರು ಒಂದು ಸಮ್ಮೇಳನಕ್ಕಾಗಿ ಅಮೆರಿಕಕ್ಕೆ ಪ್ರಯಾಣ ಬೆಳೆಸಿದರು. ಪ್ರವಾಸದ ಕೆಲವು ದಿನಗಳ ಬಳಿಕ ಅವರು ಹೃದಯಾಘಾತಕ್ಕೆ ಒಳಗಾದರು ಮತ್ತು ಅವರನ್ನು ಆಸ್ಪತ್ರೆಗೆ ಸಾಗಿಸಲಾಯಿತು.ಅದೃಷ್ಟಕ್ಕೆ ಅವರ ಬಳಿ ಪ್ರಯಾಣ ವಿಮೆ ಇತ್ತು.ಆ ವಿಮೆ ಇಲ್ಲದೇ ಹೋಗಿದ್ದರೆ, ಅವರು ಸುಮಾರು 150,000 ಡಾಲರ್ (1.25 ಕೋಟಿ ರೂ.)ಮೆಡಿಕಲ್ ಬಿಲ್‌ಪಾವತಿ ಮಾಡಬೇಕಾಗುತ್ತಿತ್ತು.ಆದಾಗ್ಯೂ, ಅವರ ಬಳಿಯಿದ್ದ ಸಮಗ್ರ ಪ್ರಯಾಣ ವಿಮೆಯು ಆಸ್ಪತ್ರೆಗೆ ದಾಖಲಾತಿ, ಶಸ್ತ್ರಚಿಕಿತ್ಸೆ ಮತ್ತು ಚಿಕಿತ್ಸೆಯ ನಂತರದ ಆರೈಕೆಯನ್ನು ಒಳಗೊಂಡಿತ್ತು, ಇದು ಅವರನ್ನು ಆರ್ಥಿಕ ದುರಂತದಿಂದ ಪಾರುಮಾಡಿತು.

**2. ಯುರೋಪ್‌ನಲ್ಲಿ ಕಳೆದುಹೋದ ಲಗೇಜ್:** ಮುಂಬೈನ ಅನನ್ಯಾ ಮೆಹ್ತಾ ಅವರು ಏಕಾಂಗಿಯಾಗಿ ಯುರೋಪ್ ಪ್ರವಾಸ ಕೈಗೊಂಡಿದ್ದರು. ಅವರು ಪ್ಯಾ–ರಿಸ್‌ನಲ್ಲಿ ಇಳಿದಾಗ ಅವರ ಚೆಕ್–ಇನ್ ಲಗೇಜ್ ಕಾಣೆಯಾಗಿತ್ತು.ಅವರ ಬ್ಯಾಗ್‌ನಲ್ಲಿ ಅಗತ್ಯ ದಾಖಲೆಗಳು, ದುಬಾರಿ ಗ್ಯಾಜೆಟ್‌ಗಳು ಮತ್ತು ಬಟ್ಟೆಗಳಿದ್ದವು.ಆದರೆ ಅವರ ಬಳಿ ಪ್ರಯಾಣ ವಿಮೆಯಿತ್ತು.ಕಳೆದುಹೋದ ವಸ್ತುಗಳಿಗೆ ಅವರಿಗೆ ಪರಿಹಾರ ನೀಡಲಾಯಿತು ಮತ್ತು ಅಗತ್ಯ ವಸ್ತುಗಳನ್ನು ಖರೀದಿಸಲು ತುರ್ತು ನಗದು ಭತ್ಯೆಯನ್ನೂ ನೀಡಲಾಯಿತು, ಇದರಿಂದ ಅವರು ತಮ್ಮ ಮುಂದಿನ ಪ್ರವಾಸವನ್ನು ಯಾವುದೇ ಸಮಸ್ಯೆ ಇಲ್ಲದೆ ಮುಂದುವರಿಸಲು ಸಹಕಾರಿಯಾಯಿತು.

**3. ಕುಟುಂಬದ ತುರ್ತು ಪರಿಸ್ಥಿತಿಯಿಂದ ರದ್ದಾದ ಪ್ರವಾಸ:** ವಿಕ್ರಮ್ ಪಟೇಲ್ ಮತ್ತು ಅವರ ಕುಟುಂಬ ಆಸ್ಟ್ರೇಲಿಯಾಕ್ಕೆ ಪ್ರವಾಸಕ್ಕೆ ಪ್ಲಾನ್ ಮಾಡಿದ್ದರು. ದುರದೃಷ್ಟವಶಾತ್, ಹೊರಡುವ ವಾರದ ಮೊದಲು ಅವರ ತಂದೆ ಗಂಭೀರ ಸ್ವರೂಪದ ಅನಾರೋಗ್ಯಕ್ಕೆ ಒಳಗಾದರು.ಇದ–ರಿಂದಾಗಿ ಅವರು ಪ್ರವಾಸವನ್ನು ರದ್ದು ಮಾಡಬೇಕಾಯಿತು. ಮರುಪಾವತಿ ಮಾಡಲಾಗದ ಹೋಟೆಲ್ ಬುಕಿಂಗ್ ಮತ್ತು ವಿಮಾನ ಟಿಕೆಟ್‌ಗಳ ಕಾರಣಕ್ಕೆ ಅವರು 3 ಲಕ್ಷ ರೂ.ಗಳಿಗೂ ಅಧಿಕ ನಷ್ಟ ಅನುಭವಿಸುವ ಸ್ಥಿತಿಯಲ್ಲಿದ್ದರು.ಅದೃಷ್ಟವಶಾತ್, ಅವರ ಬಳಿ ಪ್ರಯಾಣ ವಿಮೆಯಿತ್ತು.ವೈದ್ಯಕೀಯ ತುರ್ತು ಪರಿಸ್ಥಿತಿ ಕಾರಣಕ್ಕೆ ಪ್ರವಾಸ ರದ್ದಾಗಿದ್ದರಿಂದ, ಅವ–ರಿಗಾದ ನಷ್ಟವನ್ನು ಮರುಪಾವತಿ ಮಾಡಲಾಯಿತು.

**4.ಥೈಲ್ಯಾಂಡ್‌ನಲ್ಲಿ ಆಕಸ್ಮಿಕ ಗಾಯ:** ಬೆಂಗಳೂರಿನ ಪ್ರಿಯಾ ಮತ್ತು ರಾಜ್ ದಂಪತಿ ಹನಿಮೂನ್‌ಗೆಂದು ಥೈಲ್ಯಾಂಡ್ ಪ್ರವಾಸ ಕೈಗೊಂಡರು. ಅಡ್ವೆಂಚರ್‌ಗೆ ಸಂಬಂಧಿಸಿದ ಚಟುವಟಿಕೆಯಲ್ಲಿ ಭಾಗಿಯಾಗಿದ್ದಾಗ ರಾಜ್ ಜಾರಿ ಬಿದ್ದು ಕಾಲನ್ನು ಮುರಿದುಕೊಂಡರು.

ಅವರಲ್ಲಿದ್ದ ಪ್ರಯಾಣ ವಿಮೆ ವೈದ್ಯಕೀಯ ವೆಚ್ಚಗಳು, ಆಸ್ಪತ್ರೆಯ ವಾಸ್ತವ್ಯ ಮತ್ತು ಅವರು ಗುಣಮುಖರಾಗುವವರೆಗೆ ಅವರ ವಾಸ್ತವ್ಯವನ್ನು ವಿಸ್ತರಿಸುವ ವೆಚ್ಚವನ್ನು ಸಹ ಒಳಗೊಂಡಿತ್ತು.ಇಲ್ಲದೇ ಹೋಗಿದ್ದರೆ ದಂಪತಿಗಳು ಆಸ್ಪತ್ರೆಯ ಬಿಲ್‌ಗಳು ಮತ್ತು ವಸತಿ ಶುಲ್ಕಗಳಿಗಾಗಿ 5 ಲಕ್ಷ ರೂಗೂ ಹೆಚ್ಚು ಪಾವತಿ ಮಾಡಬೇಕಾಗುತ್ತಿತ್ತು.

**5. ವಿಮಾನ ವಿಳಂಬ, ತಪ್ಪಿದ ಸಂಪರ್ಕ:** ಹೈದರಾಬಾದ್‌ನ ಸಾಫ್ಟ್‌ವೇರ್ ಇಂಜಿನಿಯರ್ ಸಿದ್ಧಾರ್ಥ್, ಲಂಡನ್‌ನಲ್ಲಿ ತಂಗುವ ವ್ಯವಸ್ಥೆಯೊಂದಿಗೆ ಭಾರತದಿಂದ ಕೆನಡಾಕ್ಕೆ ವಿಮಾನದಲ್ಲಿ ಪ್ರಯಾಣ ಬೆಳೆಸಿದ್ದರು. ವಿಮಾನ ವಿಳಂಬದಿಂದಾಗಿ, ಅವರು ತಮ್ಮ ಸಂಪರ್ಕ ವಿಮಾನವನ್ನು ತಪ್ಪಿಸಿಕೊಂಡರು ಮತ್ತು ರಾತ್ರಿಯಿಡೀ ಅಲ್ಲಿಯೇ ತಂಗಬೇಕಾಯಿತು. ಅವರ ಪ್ರಯಾಣ ವಿಮೆಯು ಹೋಟೆಲ್ ವಾಸ್ತವ್ಯದ ವೆಚ್ಚ ಮತ್ತು ಮರು-ಬುಕಿಂಗ್ ಶುಲ್ಕವನ್ನು ಒಳಗೊಂಡಿತ್ತು, ಹಾಗಾಗಿ ಅನಗತ್ಯ ಆರ್ಥಿಕ ಒತ್ತಡದಿಂದ ಅವರು ಪಾರಾದರು.

**6. ದುಬೈನಲ್ಲಿ ಕಾನೂನು ನೆರವು:** ದುಬೈ ಪ್ರವಾಸಿಗರಾಗಿದ್ದ ಅರುಣ್ ವರ್ಮಾ ಅವರ ಮೇಲೆ ಹೋಟೆಲ್‌ನಲ್ಲಿ ಆಸ್ತಿ ಹಾನಿ ಮಾಡಿದ ಆರೋಪವನ್ನು ತಪ್ಪಾಗಿ ಹೊರಿಸಲಾಗಿತ್ತು. ಆದ-ರೆ ಅವರ ಪ್ರಯಾಣ ವಿಮೆಯಲ್ಲಿ ಕಾನೂನು ನೆರವಿನ ಸೌಲಭ್ಯ ಒಳಗೊಂಡಿತ್ತು. ಹೀಗಾಗಿ ಅವರು ವಕೀಲರನೇಮಕ ಮತ್ತು ತಾವು ನಿರಪರಾಧಿ ಎಂದು ಸಾಬೀತುಪಡಿಸಲು ಸಾಧ್ಯವಾಯಿತು, ಇದ-ರಿಂದಾಗಿ ಅವರು ದೊಡ್ಡ ದಂಡ ಮತ್ತು ಕಾನೂನಿನ ಸಂಕಷ್ಟದಿಂದ ಬಚಾವಾದರು.

**ಕೈಗೆಟುಕುವ ದರದಲ್ಲಿ ಪ್ರಯಾಣ ವಿಮೆ:** ಪ್ರಯಾಣ ವಿಮೆ ದುಬಾರಿಯಾಗಿದೆ ಎಂಬುದು ಸಾಮಾನ್ಯವಾಗಿ ಜನರಲ್ಲಿರುವ ತಪ್ಪು ಕಲ್ಪನೆ. ವಾಸ್ತವದಲ್ಲಿ, ಒಳಗೊಂಡಿರುವ ಆರ್ಥಿಕ ಅಪಾಯಗಳಿಗೆ ಹೋಲಿಸಿದರೆ ಈ ವಿಮೆ ಕೈಗೆಟುಕುವ ದರದಲ್ಲಿ ಲಭ್ಯವಿದೆ. ಉದಾಹರಣೆಗೆ, 40 ವರ್ಷ ವಯಸ್ಸಿನ ವ್ಯಕ್ತಿಯೊಬ್ಬರು 15 ದಿನಗಳ ಅಮೇರಿಕ ಪ್ರವಾಸಕ್ಕೆ 250,000 ಡಾಲರ್ (2.5 ಲಕ್ಷ ರೂ.)ಭದ್ರತೆಯನ್ನು ನೀಡುವ ಪ್ರಯಾಣ ಪಾಲಿಸಿಗೆ ಸುಮಾರು ರೂ.2,500 – ರೂ.3,500 ವೆಚ್ಚವಾಗಬಹುದು.ಈ ಸಣ್ಣ ಹೂಡಿಕೆ ವೈದ್ಯಕೀಯ ತುರ್ತುಸ್ಥಿತಿ, ಪ್ರವಾಸ ರದ್ದತಿ, ಕಳೆದುಹೋದ ಸಾಮಾನು ಮತ್ತು ಕಾನೂನು ಸಮಸ್ಯೆ ವಿಷಯದಲ್ಲಿ ಭದ್ರತೆ ಒದಗಿಸುತ್ತದೆ.

**ಪ್ರಯಾಣ ವಿಮಾ ಪಾಲಿಸಿ ಖರೀದಿಸುವ ಮುನ್ನ, ಪ್ರಯಾಣಿಕರು ಈ ಅಂಶಗಳನ್ನು ಪರಿಗಣಿಸಬೇಕು:**

**ವೈದ್ಯಕೀಯ ಸೌಲಭ್ಯ:** ಆಸ್ಪತ್ರೆಗೆ ದಾಖಲಾತಿ, ತುರ್ತು ಚಿಕಿತ್ಸೆ ಮತ್ತು ವೈದ್ಯಕೀಯ ಚಿಕಿತ್ಸೆಗಾಗಿ ಸ್ಥಳಾಂತರ.

ಪ್ರವಾಸ ರದ್ದತಿ ಮತ್ತು ಅಡ್ಡಿ: ಅನಿರೀಕ್ಷಿತ ಸಂದರ್ಭಗಳಿಂದಾಗಿ ಮರುಪಾವತಿಸಲಾಗದ ವೆಚ್ಚಗಳನ್ನು ಒಳಗೊಂಡಿರುತ್ತದೆ.

ಸಾಮಾನು ಮತ್ತು ವೈಯಕ್ತಿಕ ವಸ್ತುಗಳು: ಕಳೆದುಹೋದ, ಕದ್ದ ಅಥವಾ ಹಾನಿಗೊಳಗಾದ ಸಾಮಾನುಗಳಿಗೆ ಪರಿಹಾರ.

**ವಿಮಾನ ವಿಳಂಬ ಮತ್ತು ತಪ್ಪಿದ ಸಂಪರ್ಕ:** ಅನಿವಾರ್ಯ ವಿಳಂಬದಿಂದ ಉಂಟಾಗುವ ವೆಚ್ಚಗಳನ್ನು ಭರಿಸುವುದು.

**ವೈಯಕ್ತಿಕ ಹೊಣೆಗಾರಿಕೆ ಮತ್ತು ಕಾನೂನು ನೆರವು:** ಕಾನೂನು ವಿವಾದಗಳು ಅಥವಾ ಮೂರನೇ ವ್ಯಕ್ತಿಯ ಹಾನಿ ಹಕ್ಕುಗಳ ಸಂದರ್ಭದಲ್ಲಿ ರಕ್ಷಣೆ.

**ವಿಮಾ ಮಾರಾಟ ವ್ಯಕ್ತಿಯನ್ನು ಸಂಪರ್ಕಿಸಿ:** ವೈಯಕ್ತಿಕ ಅಗತ್ಯಗಳಿಗೆ ಅನುಗುಣವಾಗಿ ಸರಿಯಾದ ಪಾಲಿಸಿ ಆಯ್ಕೆ ಮಾಡಲು ವೃತ್ತಿಪರರ ಸಲಹೆ ಸಹಕಾರಿ.

**ಕ್ಲೈಮ್ ಸೇವೆಗಳು:** ತುರ್ತು ಸಂದರ್ಭದಲ್ಲಿ ತಡೆರಹಿತ ಕ್ಲೈಮ್ ಪ್ರಕ್ರಿಯೆಗಾಗಿ ವಿಮಾ ಕಂಪನಿಯು ವಿದೇಶದಲ್ಲಿ ಕ್ಲೈಮ್ ಸಹಾಯ ಜಾಲವನ್ನು ಹೊಂದಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಿ.

**ಬಾಟಮ್ ಲೈನ್:** ಪ್ರಯಾಣ ವಿಮೆ ಕೇವಲ ಹೆಚ್ಚುವರಿ ವೆಚ್ಚವಲ್ಲ–ಇದು ಅನಿರೀಕ್ಷಿತ ಆರ್ಥಿಕ ಹಿನ್ನಡೆಗಳಿಂದ ಪ್ರಯಾಣಿಕರನ್ನು ರಕ್ಷಿಸುವ ಪ್ರಮುಖ ಸುರಕ್ಷತಾ ಜಾಲ. ಪ್ರಯಾಣ ವಿಮೆಯು ಜನರನ್ನು ಅತ್ಯಂತ ದುಃಖದ ಮತ್ತು ದುಬಾರಿ ಸಂದರ್ಭಗಳಲ್ಲಿ ಹೇಗೆ ರಕ್ಷಣೆ ಮಾಡಿದೆ ಎಂಬುದನ್ನು ನೈಜ-ಜೀವನದ ಘಟನೆಗಳ ಮೂಲಕ ಬಿಂಬಿಸಲಾಗಿದೆ. ಹಾಲಿಡೇ ಅಥವಾ ವ್ಯವಹಾರಕ್ಕಾಗಿ, ಯಾವುದೇ ಪ್ರಯಾಣಿಕರು ಸಮಗ್ರ ಪ್ರಯಾಣ ವಿಮೆಯಿಲ್ಲದೆ ವಿದೇಶಕ್ಕೆ ವಿಮಾನ ಹತ್ತಬಾರದು. ಪ್ರಯಾಣ ವಿಮೆ ಮನಸ್ಸಿಗೆ ನೆಮ್ಮದಿ ನೀಡುತ್ತದೆ. ಆಹ್ಲಾದಕರ ಪ್ರವಾಸವು ಆರ್ಥಿಕ ದುಃಸ್ವಪ್ನವಾಗಿ ಬದಲಾಗದಂತೆ ಮಾಡಲು ನಿಮ್ಮ ಬಳಿ ಒಂದು ಪ್ರಯಾಣ ವಿಮೆ ಬೇಕು. ಆದ್ದರಿಂದ ವಿದೇಶ ಪ್ರವಾಸವನ್ನು ಯೋಜಿಸುವಾಗ ನಿಮ್ಮ ಪ್ರಯಾಣ ವಿಮಾ ಅವಶ್ಯಕತೆಗಳ ಬಗ್ಗೆ ನಿಮ್ಮ ವಿಮಾ ಮಾರಾಟ ವ್ಯಕ್ತಿಯೊಂದಿಗೆ ಚರ್ಚಿಸಿ.


INSPIRE INDIA
WEALTH PVT LTD

ಹೂಡಿಕೆ ವೇಳೆ -ನೆನಪಿರಲಿ ಇನ್‌ಸ್ಪೈರ್ ಇಂಡಿಯಾ ಎಎಂಎಫ್ಐ ನೋಂದಾಯಿತ ಮ್ಯೂಚುಯಲ್ ಫಂಡ್ ವಿತರಕರು



ಮ್ಯುಚುಯಲ್ ಫಂಡ್ | ಸ್ಟಾಕ್ ಬ್ರೋಕಿಂಗ್ | ಹಣಕಾಸು ಯೋಜನೆ | ರಿಯಲ್ ಎಸ್ಟೇಟ್ | ತೆರಿಗೆ ಉಳಿತಾಯ ಬಾಂಡ್ | ವಿಮೆ | ಸಂಪತ್ತಿನ ನಿರ್ವಹಣೆ | ಹಣಕಾಸಿನ ಮೌಲ್ಯಮಾಪನ | ತೆರಿಗೆ ಸಲ್ಲಿಕೆ | ವಿಲ್ ಬರವಣಿಗೆ

ಹಕ್ಕು ನಿರಾಕರಣೆ

ಈ ವಾರ್ತಾಪತ್ರದ ಸಂಕಲನ ಮಾಡುವ ಸಂದರ್ಭದಲ್ಲಿ ನಾವು ಎಲ್ಲ ರೀತಿಯ ಕಾಳಜಿ ಮತ್ತು ಎಚ್ಚರಿಕೆಯನ್ನು ವಹಿಸಿರುತ್ತೇವೆ. ಇಲ್ಲಿನ ಮಾಹಿತಿಗಳನ್ನು ಹಲವು ನಂಬಿಕೆಗೆ ಅರ್ಹವಾದ ಮೂಲಗಳಿಂದ ಪಡೆದಿರುತ್ತೇವೆ. ಆದರೆ, ಯಾವುದೇ ಮಾಹಿತಿಯ ಖಚಿತತೆ, ಅರ್ಹತೆ ಅಥವಾ ಪರಿಪೂರ್ಣತೆಯ ಬಗ್ಗೆ ಖಾತರಿಯನ್ನು ನೀಡುವುದಿಲ್ಲ. ಹಾಗಾಗಿ ಇಂತಹ ಮಾಹಿತಿ ಬಳಕೆಯಿಂದ ಆಗಬಹುದಾದ ಯಾವುದೇ ದೋಷ ಅಥವಾ ಲೋಪಗಳಿಗೆ ಜವಾಬ್ದಾರರಾಗಿರುವುದಿಲ್ಲ. ಈ ವಾರ್ತಾಪತ್ರದಲ್ಲಿ ತಿಳಿಸಲಾದ, ಚರ್ಚಿಸಲಾದ ಅಥವಾ ಶಿಫಾರಸ್ಸು ಮಾಡಲಾದ ಯಾವುದೇ ಯೋಜನೆಗಳಿಗೆ ಸಂಬಂಧಿಸಿದಂತೆ ಹೂಡಿಕೆ ಮಾಡುವ ಸಮರ್ಪಕತೆ ಬಗ್ಗೆ ಹೂಡಿಕೆದಾರರು ಸೂಕ್ತವಾದ ಹಣಕಾಸು ಸಲಹೆಗಳನ್ನು ಪಡೆಯಬೇಕು ಮತ್ತು ಭವಿಷ್ಯದ ನಿರೀಕ್ಷೆಗಳ ಬಗ್ಗೆ ನೀಡಿರುವ ಹೇಳಿಕೆಗಳು ಕಾರ್ಯರೂಪಕ್ಕೆ ಬರಬಹುದು ಅಥವಾ ಬಾರದೇ ಇರಬಹುದು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಮ್ಯೂಚುಯಲ್ ಫಂಡ್ ಹೂಡಿಕೆಗಳು ಯಾವತ್ತೂ ಮಾರುಕಟ್ಟೆಗೆ ಸಂಬಂಧಿಸಿದ ಅಪಾಯದ ವ್ಯಾಪ್ತಿಗೆ ಒಳಪಟ್ಟಿರುತ್ತವೆ. ಹಾಗಾಗಿ ಹೂಡಿಕೆ ಮಾಡುವುದಕ್ಕೂ ಮುನ್ನ ನಿಮಗೆ ನೀಡಲಾದ ದಾಖಲೆಗಳನ್ನು ದಯವಿಟ್ಟು ಅತ್ಯಂತ ಎಚ್ಚರಿಕೆಯಿಂದ ಓದಿಕೊಳ್ಳಿ. ಹಿಂದಿನ ನಿರ್ವಹಣೆಯ ಕೇವಲ ಸೂಚಕ ಉದ್ದೇಶವನ್ನು ಹೊಂದಿದ್ದು ಅದು ಯಾವುದೇ ಕಾರಣಕ್ಕೂ ಭವಿಷ್ಯದ ಮಾರ್ಗದರ್ಶಕವಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು.

ಇನಸ್ಪೈರ್ ಇಂಡಿಯಾ ವೆಲ್ತ್ ಪ್ರೈ.ಲಿ.
#65, ಸುರಾಸ ಎನ್‌ಕ್ಲೇವ್, ಮೊದಲ ಮಹಡಿ
ಪುಟ್ಟಣ್ಣ ರಸ್ತೆ, ಗಾಂಧಿ ಬಜಾರ್,
ಬಸವನಗುಡಿ, ಬೆಂಗಳೂರು -560004
9035414414, 080-42129917
info@inspireindiafs.com

ಕೆತ್ತಿಸಿಕೊಳ್ಳಲು ತಾಳ್ಮೆ ಇಲ್ಲದವರು ವಿಗ್ರಹವಾಗಲು ಹಂಬಲಿಸಬಾರದು ಕಲ್ಲಾಗಿಯೇ ಇದ್ದು ಬಿಡಬೇಕು